**<u>FDP 1/2016</u>** ಪಿ.ಡಬ್ಲ್ಯೂ:- **3**

ದಿನಾಂಕಃ **13-10-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ:- ಅರ್ಜಿದಾರರ ಪರ ವಕೀಲರಿಂದ:-</u>

ನಾನು ಈ ಅರ್ಜಿಯಲ್ಲಿ ಅರ್ಜಿದಾರನ ಪರ ಸಾಕ್ಷಿಯಾಗಿದ್ದು, ಮತ್ತು ಈ ಅರ್ಜಿಯಲ್ಲಿ ನಾನು 3 ನೇ ಎದುರುದಾರಳಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿದೆ.

1 ನೇ ಎದುರುದಾರರು ಅರ್ಜಿದಾರರಿಗೆ ಮರಣ ಶಾಸನವನ್ನು ಬರೆದು ಕೊಟ್ಟಿದ್ದು, ಸದರಿ ಮರಣ ಶಾಸನದಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮರಣ ಶಾಸನವನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :- 4(ಎ) ಮತ್ತು 7(ಎ), (ಬಿ) ಎದುರುದಾರರ ಪರ ವಕೀಲರಿಂದ:-</u>

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಅರ್ಜಿದಾರರು ನನ್ನ ತಮ್ಮ. ಆತನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾನೆ. 1 ನೇ ಎದುರುದಾರರಿಗೆ ನಾವು ಒಟ್ಟು 5 ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಅದರಲ್ಲಿ ಒಬ್ಬ ಗಂಡು ಮಗ ಮಹೇಶಪ್ಪ ಮತ್ತು ಹೆಣ್ಣು ಮಕ್ಕಳಲ್ಲಿ ಶಾರದಮ್ಮ ಮರಣ ಹೊಂದಿರುತ್ತಾರೆ. ನಾನು ನನ್ನ ತಮ್ಮನ ವಿರುದ್ಧ ಭಾಗಶಃ ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ ನಮಗೆ ನ್ಯಾಯಾಲಯದಿಂದ ಭಾಗಶಃವಾಗಿದೆ ಎಂದರೆ ಸರಿ. ನಾನು, ಗಂಗಮ್ಮ, ಚಂದ್ರಮ್ಮ, ಶಾಂತಮ್ಮ, ಸಾಕಮ್ಮ ಮತ್ತು ಗೌರಮ್ಮ ಸೇರಿಕೊಂಡು ಅರ್ಜಿದಾರರ ಮೂಲಕ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಆಸ್ತಿಯ ವಿಚಾರದಲ್ಲಿ ನಮಗೂ ಮತ್ತು ಸಾವಿತ್ರಮ್ಮ ರವರಿಗೆ ಮನಸ್ತಾಪ ಉಂಟಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದಕ್ಕಿಂತ ಮೊದಲು ನಮಗೂ ಮತ್ತು ಸಾವಿತ್ರಮ್ಮ ರವರು ಅನ್ಯೋನ್ಯವಾಗಿದ್ದೇವು. 1 ನೇ ಎದುರುದಾರರು ತಮ್ಮ ಕೊನೆಯ ಸಮಯದಲ್ಲಿ ಅರ್ಜಿದಾರರ ಮನೆಯಲ್ಲಿ ವಾಸವಾಗಿದ್ದರು. ನಿಪಿ-1 ದಾಖಲೆಯನ್ನು ಬರೆದುಕೊಡುವ ಸಂದರ್ಭದಲ್ಲಿ 1 ನೇ ಎದುರುದಾರರಿಗೆ 70 ವರ್ಷ ವಯಸ್ಸಾಗಿದ್ದು, ಅವರು ದೈಹಿಕವಾಗಿ ಮತ್ತು

ಮಾನಸಿಕವಾಗಿ ಚೆನ್ನಾಗಿದ್ದರು. ನಿಪಿ-1 ದಾಖಲೆಯನ್ನು ಬರೆದುಕೊಡುವ ಸಂದರ್ಭದಲಿ 90 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಅವರಿಗೆ ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ . 1 ನೇ ಎದುರುದಾರರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಆಗಿದ್ದರೂ ಸಹ ನಿಪಿ-1 ದಾಖಲೆಯನ್ನು ಬರೆದುಕೊಡುವ ಸಮಯದಲ್ಲಿ ಅವರಿಗೆ ಸಂಪೂರ್ಣವಾಗಿ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ನಿಪಿ-1 ದಾಖಲೆಯಲ್ಲಿ ಇರುವ ವಿಚಾರಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು 1 ನೇ ಎದುರುದಾರರಿಗೆ 2019 ನೇ ಸಾಲಿನಂದು ಬರೆದುಕೊಟ್ಟಿರುತ್ತಾರೆ ಆದರೆ ನಿಖರವಾದ ದಿನಾಂಕ ಮತ್ತು ತಿಂಗಳು ನೆನಪಿರುವುದಿಲ್ಲ. ನಿಪಿ-1 ದಾಖಲೆಯನ್ನು ಅರ್ಜಿದಾರರು ಹೇಳಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಏನು ಬರೆದಿದೆ ಎಂಬ ವಿಚಾರವನ್ನು ಕರಿಬಸಪ್ಪ ಓದಿ ತಿಳಿಸಿರುತ್ತಾರೆ. ನಿಪಿ-1 ನೇ ದಾಖಲೆಯಲ್ಲಿ ನಮೂದಾಗಿರುವ ಆಸ್ತಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿ ಇದ್ದ ಸಂದರ್ಭದಲ್ಲಿ ತಯಾರಿಸಿದರೆ ಎಂದರೆ ಸರಿ. ನಿಪಿ-1 ದಾಖಲೆಯನ್ನು ಬರೆದುಕೊಡುವ ಸಂದರ್ಭದಲ್ಲಿ 1 ನೇ ಎದುರುದಾರ ಹಿಸ್ಸೆಯ ಬಗ್ಗೆ ನಿಖರವಾಗಿ ಯಾವ ಭಾಗದಲ್ಲಿ ತನ್ನ ಭಾಗಕ್ಕೆ ಬರುತ್ತದೆ ಎಂದು ಆದೇಶವಾಗಿಲ್ಲ ಎಂದರೆ ಸರಿಯಲ್ಲ. ನಿಪಿ-1 ದಾಖಲೆಯನ್ನು ನಾನು, ಮಾದಪ್ಪ ಮತ್ತು ಅರ್ಜಿದಾರರು ಸೇರಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆನಿಪಿ -1 ದಾಖಲೆಯನ್ನು ಬರೆದುಕೊಡವ ಸಂದರ್ಭದಲ್ಲಿ ಅವರಿಗೆ ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ ಮತ್ತು ಮರಣ ಶಾಸನವನ್ನು ಬರೆದುಕೊಡುವ ಯಾವುದೇ ಇಚ್ಛೆ ಇರಲಿಲ್ಲ ನಾವುಗಳು ಬಲವಂತದಿಂದ ನಿಪಿ-1 ದಾಖಲೆಗೆ 1 ನೇ ಎದುರುದಾರರ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿದ್ದೇವೆ ಎಂದರೆ ಸರಿಯಲ್ಲ.

ಈ ಅರ್ಜಿಯಲ್ಲಿ ಸರ್ವೆ ಅಧಿಕಾರಿಗಳು ಸರ್ವೆ ಮಾಡಲು ನನಗೆ ತಿಳುವಳಿಕ ಪತ್ರವನ್ನು ನೀಡಿದ್ದು, ನಾವು ಅದನ್ನು ಸ್ವೀಕರಿಸಿದ ನಂತರ ಸರ್ವೆ ಮಾಡುವ ಸ್ಥಳದಲ್ಲಿ ಸರ್ವೆ ಮಾಡುವ ಸಮಯದಲ್ಲಿ ಹಾಜರಿದ್ದೇವು ಎಂದರೆ ಸರಿ. 1 ನೇ ಎದುರುದಾರರು ಮರಣ ಹೊಂದಿದ ಒಂದು ವರ್ಷದ ನಂತರ ಸರ್ವೆ ಅಧಿಕಾರಿಗಳು ಸರ್ವೆ ಮಾಡಲು ಬಂದಿದ್ದರು ಎಂದರೆ ಸರಿ. ಸರ್ವೆ ಅಧಿಕಾರಿಗಳು 1 ನೇ ಎದುರುದಾರರಿಗೆ ಕೊಟ್ಟ ತಿಳುವಳಿಕೆ ಪತ್ರವನ್ನು ನಾನು ಪಡೆದುಕೊಂಡಿರುತ್ತೇನೆ. ಸರ್ವೆ ಅಧಿಕಾರಿಗಳು ಸರ್ವೆ ಮಾಡಲು ಬಂದಾಗ 1 ನೇ ಎದುರುದಾರರು ಒಂದು ವರ್ಷದ ಹಿಂದೆ ತೀರಿಕೊಂಡಿದ್ದಾರೆ ಎಂಬ ವಿಚಾರವನ್ನು ಅವರಿಗೆ ತಿಳಿಸಿರುವುದಿಲ್ಲ. ಸರ್ವೆ ಅಧಿಕಾರಿಗಳು

ಸರ್ವೆ ಮಾಡುವ ಸಮಯದಲ್ಲಿ 1 ನೇ ಎದುರುದಾರರು ಅರ್ಜಿದಾರರಿಗೆ ಮರಣ ಶಾಸನವನ್ನು ಬರೆದುಕೊಟ್ಟ ಬಗ್ಗೆ ತಿಳಿಸಿರುತ್ತೇವೆ. ಸರ್ವೆ ಅಧಿಕಾರಿಗಳಿಗೆ 1 ನೇ ಎದುರುದಾರರು ತೀರಿಕೊಟ್ಟ ವಿಚಾರ ತಿಳಿದರೆ ಅವರು ಸರ್ವೆ ಮಾಡುವುದಿಲ್ಲ ಎಂಬ ಕಾರಣಕ್ಕಾಗಿ 1 ನೇ ಎದುರುದಾರರು ತೀರಿಕೊಂಡ ವಿಚಾರವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1 ದಾಖಲೆಯನ್ನು ನಾನು ಹೋದ ನಂತರ ಬೆರಳಚ್ಚು ಮಾಡಿಸಿರುತ್ತಾರೆ. 1 ನೇ ಎದುರುದಾರರು ಕರಿಬಸಪ್ಪನವರಿಗೆ ಹೇಳಿ ನಿಪಿ-1 ದಾಖಲೆಯನ್ನು ಬರೆದಿರುತ್ತಾರೆ. ನಿಪಿ-1 ದಾಖಲೆಗೆ ಮೊದಲಿಗೆ ಯಾರು ಸಹಿ ಮಾಡಿದ್ದರು ಏನುವ ವಿಚಾರ ನನಗೆ ಗೊತ್ತಿಲ್ಲ. ಮಾದಪ್ಪ ಸಹಿ ಮಾಡಿದ ನಂತರ ನಾನು ಸಹಿಯನ್ನು ಮಾಡಿರುತ್ತೇನೆ. ನನ್ನ ಮತ್ತು ಮಾದಪ್ಪನ ಸಹಿಯನ್ನು ಹೊರತುಪಡಿಸಿದ್ದರೆ ಬೇರೆ ಯಾರು ನಿಪಿ-1 ದಾಖಲೆಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಅರ್ಜಿದಾರರು , 2 ,5, 6, ನೇ ಎದುರುದಾರರು ನನ್ನ ಮೈದುನಾ ಮಾದಪ್ಪನ ಜೊತೆ ಸೇರಿಕೊಂಡು 4 (ಎ) ಮತ್ತು 7 (ಎ) ಮತ್ತು (ಬಿ) ಎದುರುದಾರರಿಗೆ ನಿಪಿ-1 ರಲ್ಲಿ ನಮೂದಾಗಿರುವ ಆಸ್ತಿಯಲ್ಲಿ ಅವರಿಗೆ ಭಾಗಶಃದಿಂದ ವಂಚಿತರನಾಗಿ ಮಾಡುವ ಉದ್ದೇಶದಿಂದ ನಿಪಿ-1 ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಆಸ್ತಿಯನ್ನು ಕೊಡಿಸಿ ಕೊಡುವ ಉದ್ದೇಶದಿಂದ ಮೋಸದಿಂದ ನಿಪಿ-1 ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.
4 (ಎ)ಎದುರುದಾರು ಕೂಲಿ ಕೆಲಸವನ್ನು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೋಟೇಲ್ ವ್ಯಾಪಾರ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ರ ಆಸ್ತಿಯನ್ನು ಮಾದಪ್ಪ ರವರು ಈಗ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಅರ್ಜಿದಾರರು ದುರ್ಗಮ್ಮ ಬಸ್ಸಿನ ಚಾಲಕರಾಗಿದ್ದು ಮತ್ತು ಅವರು ಉಡುಪಿಯಲ್ಲಿ ಮದುವೆ ಮಾಡಿಕೊಂಡು ಅವರು ಅಲ್ಲಿ ವಾಸವಾಗಿದ್ದು , ಊರಿಗೆ ಆಗಾಗ್ಗೆ ಬಂದು ಹೋಗುತ್ತಿದ್ದರು. ಅರ್ಜಿದಾರರು ಯಾವತ್ತು ವ್ಯವಸಾಯ ಕೆಲಸವನ್ನು ಮಾಡಿಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.